

ರಣಜಿ ಪಂದ್ಯ

**ಐಪಿಎಲ್‌ಗೆ ಬಿಸಿಸಿಐ ನೀಡುತ್ತಿರುವ ಆದ್ಯತೆ ನೋಡಿದರೆ, ಕ್ರಿಕೆಟ್‌ನ ಮೂಲಸೌಂದರ್ಯಕ್ಕೆ ಚುಟುಕು ಕ್ರಿಕೆಟ್ ಭಾರತದಲ್ಲಿ ದೊಡ್ಡ ಹಾನಿ ಉಂಟು ಮಾಡುತ್ತದೆ ಎನ್ನುವ ಅನುಮಾನ ಹುಟ್ಟುಹಾಕಿದೆ.**

ಜನರಿಗೆ ತಿಳಿಯುತ್ತಿಲ್ಲ. ಅಂದರೆ ಆಟಗಾರರು ಬೆರಳೆಣಿಕೆಯಷ್ಟೇ ಪಂದ್ಯಗಳನ್ನು ಆಡುವ ಹೊತ್ತಿಗೆ ತಂಡದಲ್ಲಿ ಸ್ಥಾನ ಕಳೆದುಕೊಂಡಿರುತ್ತಾರೆ. ಬ್ಯಾಟಿಂಗ್, ಬೌಲಿಂಗ್ ಕೌಶಲದ ಕೊರತೆ, ತಾಂತ್ರಿಕ ಅಜ್ಞಾನ ಇದಕ್ಕೆ ಕಾರಣವಾಗುತ್ತಿದೆ. ಹೊಸ ಆಟಗಾರನ ಪ್ರವೇಶವಾಗಿ ಆತ ಕೂಡ ಕೆಲ ದಿನಗಳಲ್ಲಿಯೇ ತಂಡದಿಂದ ಹಾಗೂ ಜನರ ಮನದಿಂದ ಕಣ್ಮರೆಯಾಗುತ್ತಿದ್ದಾನೆ.

ಹಿಂದಿನ ಸಂದರ್ಭಕ್ಕೂ ಈಗಿನ ಪರಿಸ್ಥಿತಿಗೂ ಕ್ರಿಕೆಟ್‌ನ ಸ್ವರೂಪ, ತಾಂತ್ರಿಕತೆಯಲ್ಲಿ ಸಾಕಷ್ಟು ಬದಲಾವಣೆಯಾಗಿವೆಯಾದರೂ, ಹಿಂದಿನ ಆಟಗಾರರಲ್ಲಿದ್ದ ಗಟ್ಟಿತನ ಈಗ ಕಾಣುತ್ತಿಲ್ಲ. ದೇಶಿ ಟೂರ್ನಿಗಳನ್ನು ಗಂಭೀರವಾಗಿ ಪರಿಗಣಿಸಿ ಆಡಬೇಕು. ಫಿಟ್‌ನೆಸ್ ಜೊತೆದ ಆಟದ ಕೌಶಲ ವೃದ್ಧಿಗೆ ಯುವ ಆಟಗಾರರು ಒತ್ತು ಕೊಡಬೇಕಾಗಿದೆ.

**-ಆನಂದ ಯಲ್ವಿಗಿ**

ಕರ್ನಾಟಕ ಹಾಗೂ ಮುಂಬೈ ಎರಡೂ ತಂಡಗಳ ಪರ ರಣಜಿ ಆಡಿದ್ದ ಆಟಗಾರ

ಮಹತ್ವದ್ದಾಗಿದೆ. ಐಪಿಎಲ್‌ನಲ್ಲಿ ಎಲ್ಲರಿಗೂ ಅವಕಾಶ ಸಿಗುವುದಿಲ್ಲ. ರಣಜಿಯಲ್ಲಿ 40ಕ್ಕಿಂತಲೂ ಹೆಚ್ಚು ಪಂದ್ಯಗಳನ್ನು ಆಡಿದ ಆಟಗಾರನಿಗೆ ಪಂದ್ಯವಾಡುವ ದಿನ ₹60 ಸಾವಿರ, 21ರಿಂದ 40 ಪಂದ್ಯಗಳ ಒಳಗೆ ಆಡಿದವರಿಗೆ ನಿತ್ಯ ₹50 ಸಾವಿರ, 23 ವರ್ಷದ ಒಳಗಿನವರ ಟೂರ್ನಿಗಳಲ್ಲಿ ಆಡುವವರಿಗೆ ಒಂದು ದಿನಕ್ಕೆ ₹25 ಸಾವಿರ ಮತ್ತು 19 ವರ್ಷದ ಒಳಗಿನವರ ವಿಭಾಗಕ್ಕೆ ₹20 ಸಾವಿರ ಸಂಭಾವನೆ ನೀಡುತ್ತದೆ. ಇದು ಅನೇಕ ಜನ ಆಟಗಾರರಿಗೆ ಬದುಕು ಕಲ್ಪಿಸಿಕೊಟ್ಟಿದೆ. ಜೀವನಕ್ಕೆ ಆಸರೆಯೂ ಆಗಿದೆ.

## ಮಿಲಿಯನ್ ಡಾಲರ್ ಬೇಬಿ

ಹದಿನಾಲ್ಕು ವರ್ಷಗಳ ಹಿಂದೆ 'ಮಿಲಿಯನ್ ಡಾಲರ್ ಬೇಬಿ' ಐಪಿಎಲ್ ಆರಂಭವಾದಾಗ, ಚುಟುಕು ಕ್ರಿಕೆಟ್ ಅನ್ನು ಕೋಟ್ಯಂತರ ಜನ ಬೇಗ ಒಪ್ಪಿಕೊಳ್ಳುತ್ತಾರೆ ಎನ್ನುವುದು ಅನಿರೀಕ್ಷಿತವೇ ಆಗಿತ್ತು. ಆದರೆ, ಇತ್ತೀಚೆಗಿನ ಆವೃತ್ತಿಗಳಲ್ಲಿ ಐಪಿಎಲ್‌ಗೆ ಬಿಸಿಸಿಐ ನೀಡುತ್ತಿರುವ ಆದ್ಯತೆ ನೋಡಿದರೆ, ಕ್ರಿಕೆಟ್‌ನ ಮೂಲಸೌಂದರ್ಯಕ್ಕೆ ಚುಟುಕು ಕ್ರಿಕೆಟ್ ಭಾರತದಲ್ಲಿ ದೊಡ್ಡ ಹಾನಿ ಉಂಟು ಮಾಡುತ್ತದೆ ಎನ್ನುವ ಅನುಮಾನ ಹುಟ್ಟುಹಾಕಿದೆ.

'ಪ್ರೊ ಕಬಡ್ಡಿ ಲೀಗ್' ಆರಂಭವಾದ ವರ್ಷಗಳಲ್ಲಿ ಭಾರಿ ಜನಪ್ರಿಯತೆ ಪಡೆಯಿತು. ಆಟಗಾರರು ರಾತ್ರೋರಾತ್ರಿ ಲಕ್ಷಾಧೀಶರಾದರು. ಜನ ಬೆರಗು ಕಣ್ಣಿನಿಂದ ನೋಡುವಂತೆ ಆಯಿತು. ಲೀಗ್ ಆರಂಭವಾದ ಕೆಲವೇ ವರ್ಷಗಳಲ್ಲಿ ಭಾರತ ತಂಡದಲ್ಲಿ ಆಡಿದ್ದ ಹಲವು ಅನುಭವಿ ಆಟಗಾರರು 'ಲೀಗ್‌ನ ಪೆಟ್ಟ'ನಿಂದಾಗಿ ತೆರೆಮರೆಗೆ ಸರಿದರು. ಕೆಲವೇ ವರ್ಷಗಳಲ್ಲಿ ಆಟಗಾರರಿಗೆ ಕಾಡಿದ ಗಾಯದ ಸಮಸ್ಯೆ ಭವಿಷ್ಯದಲ್ಲಿ ಮಾರಕವಾಗುವ ಅಪಾಯವಿದೆ. ಅದೇ ಸ್ಥಿತಿ ಈಗ ಕ್ರಿಕೆಟ್‌ನಲ್ಲಿಯೂ ಎದುರಾಗಿದೆ. ಒಂದು ವರ್ಷದ ಹಿಂದೆ ಭಾರತ ತಂಡವು ಆಸ್ಟ್ರೇಲಿಯಾದಲ್ಲಿ ಕೆಲವು ಅಪೂರ್ವ ಗೆಲುವುಗಳನ್ನು ದಾಖಲಿಸಿತು. ವೇಗಿಗಳ ಸ್ವರ್ಗ ಎನಿಸಿರುವ ಅಲ್ಲಿನ ಪಿಚ್‌ಗಳಲ್ಲಿ ಹಲವು ವಿಜಯಗಳನ್ನೂ ದಾಖಲಿಸಿತು. ಆದರೆ, ಈ ಯಶಸ್ಸಿನಲ್ಲಿ ಪಾಲುದಾರರಾಗಿದ್ದ ಆಟಗಾರರು ಮೇಲಿಂದ ಮೇಲೆ ಗಾಯದ ನೋವು ಅನುಭವಿಸಿದರು.

ವೈಟ್‌ಬಾಲ್ ಸರಣಿಯ ಇಬ್ಬರು ಹೀರೊಗಳಾದ ಹಾರ್ದಿಕ್ ಪಾಂಡ್ಯ ಮತ್ತು ರವೀಂದ್ರ ಜಡೇಜಾ ಗಾಯದ ಕಾರಣ ವೆಸ್ಟ್ ಇಂಡೀಸ್ ಎದುರಿನ ಸರಣಿಯಿಂದ ಹೊರಗುಳಿದರು. ಆರಂಭದಲ್ಲಿ ಸುದ್ದಿ ಮಾಡಿದ ವಾಷಿಂಗ್ಟನ್ ಸುಂದರ್ ಪದೇ ಪದೇ ಗಾಯದ ಸಮಸ್ಯೆ ಎದುರಿಸಿದರು. ಎಡಗೈ ಮಧ್ಯಮ ವೇಗಿ ಟಿ. ನಟರಾಜನ್ ರಾಷ್ಟ್ರೀಯ ತಂಡದಲ್ಲಿ ಕಾಣಿಸಿಕೊಂಡಷ್ಟೇ ವೇಗವಾಗಿ ವಾಪಸ್ ಹೋದರು.

ಬಿಡುವಿಲ್ಲದ ಕ್ರಿಕೆಟ್ ಟೂರ್ನಿಗಳು ಆಟಗಾರರನ್ನು ಹೈರಾಣಾಗಿಸುತ್ತಿವೆಯಷ್ಟೇ ಅಲ್ಲದೆ; ಫಿಟ್‌ನೆಸ್ ಹಾಗೂ ಸ್ಥಿರತೆಗೂ ಪೆಟ್ಟು ನೀಡುತ್ತಿವೆ. ಕೋವಿಡ್ ಕಾರಣದಿಂದಾಗಿ ಪೂರ್ವಯೋಜಿತ ಸರಣಿಗಳು ನಡೆದಿಲ್ಲ. ಅವುಗಳನ್ನು ಸರಿದೂಗಿಸುವ ಸಲುವಾಗಿ ಬಿಸಿಸಿಐ ನಿರಂತರ ಟೂರ್ನಿಗಳನ್ನು ಆಯೋಜಿಸುತ್ತಿದೆ.

ಕಳೆದ ವರ್ಷ ಇಂಗ್ಲೆಂಡ್ ತಂಡದ ವಿರುದ್ಧ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಸರಣಿಗಾಗಿ ಭಾರತದ ಟೆಸ್ಟ್ ತಂಡ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿತ್ತು. ಏತನ್ಮಧ್ಯೆ ಐಪಿಎಲ್‌ನ ಉದಯೋನ್ಮುಖ ತಾರೆಗಳನ್ನು ಒಳಗೊಂಡ 'ಬಿ' ತಂಡವು ಶ್ರೀಲಂಕಾ ವಿರುದ್ಧ ಏಕದಿನ ಮತ್ತು ಟಿ–20 ಪಂದ್ಯಗಳನ್ನು ಆಡಿತು. ಎರಡು